**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ೧೫.೦೩.೨೦೧೩ರಂದು ನಡೆದ ಪ್ರಶಾಸನ ಸಮಿತಿ ೧೨ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿಯ ೧೨ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾರ್ಚ್ ೧೫, ೨೦೧೩ರ ಶುಕ್ರವಾರ ಬೆಳಿಗ್ಗೆ ೧೧.೩೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |
| ೩. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೪. | **ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,** ಕವಲೇದುರ್ಗ | ಸದಸ್ಯರು |
| ೫. | **ಡಾ. ಎಚ್.ಆರ್. ವಿಶ್ವಾಸ್,** ಮಂಗಳೂರು | ಸದಸ್ಯರು |
| ೬. | **ಡಾ. ಪಿ.ಬಿ. ಸಂತಪ್ಪನವರ,** ಗುಲಬರ್ಗಾ | ಸದಸ್ಯರು |
| ೭. | **ಡಾ. ಟಿ.ಎಸ್. ಸತ್ಯವತಿ,** ಬೆಂಗಳೂರು | ಸದಸ್ಯರು |
| ೮. | **ಶ್ರೀ ಜಿ. ಹನುಮಂತರಾಯಪ್ಪ,** ತುಮಕೂರು | ಸದಸ್ಯರು |
| ೯. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೧೦. | **ಡಾ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೧೧. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೭. | **ಶ್ರೀ ಡಿ. ಸುರೇಂದ್ರಕುಮಾರ್,** ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಾಸನ ಸಮಿತಿ ಹನ್ನೊಂದನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 08.01.2013ರಂದು ನಡೆದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ಹನ್ನೊಂದನೇ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 2**ಕ್ಕೆ ಸಂಬಂಧಿಸಿದಂತೆ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. **ವಿಷಯ ಸಂಖ್ಯೆ 3**ಕ್ಕೆ ಸಂಬಂಧಿಸಿದಂತೆ ಯುಜಿಸಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸರ್ಕಾರಕ್ಕೆ ಸಲ್ಲಿಸಲಾಗಿದೆ. **ವಿಷಯ ಸಂಖ್ಯೆ 4**ಕ್ಕೆ ಸಂಬಂಧಿಸಿದಂತೆ ದತ್ತಿನಿಧಿ ಮೊತ್ತ ರೂ. 3,32,391/–ಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಚಾಮರಾಜಪೇಟೆ ಶಾಖೆಯಲ್ಲಿ ಸ್ಥಿರನಿಧಿಯಾಗಿರಿಸಲಾಗಿದೆ. ವಿಷಯ ಸಂಖ್ಯೆ 5ಕ್ಕೆ ಸಂಬಂಧಿಸಿದಂತೆ 2013–14ನೇ ಸಾಲಿನಿಂದ ಪಿಎಚ್.ಡಿ. ಪದವಿ ಪ್ರಾರಂಭಿಸಲು ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 6**ಕ್ಕೆ ಸಂಬಂಧಿಸಿದಂತೆ ಗುಜರಾತಿನ ಸೋಮನಾಥ ಸಂಸ್ಕೃತ ವಿಶ್ವವಿದ್ಯಾಲಯದೊಂದಿಗೆ MOU ಮಾಡಿಕೊಳ್ಳಲಾಗಿದೆ. **ವಿಷಯ ಸಂಖ್ಯೆ 7**ಕ್ಕೆ ಸಂಬಂಧಿಸಿದಂತೆ ಯೋಜನಾ ಸಹಾಯಕ ಹುದ್ದೆಗೆ ನೇಮಕಗೊಂಡ ಎಂಟೂ ಮಂದಿ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. **ವಿಷಯ ಸಂಖ್ಯೆ 8**ಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಮಾಹಿತಿಗಳನ್ನೊಳಗೊಂಡ ಬಹುವರ್ಣದ 1000 ಕ್ಯಾಲೆಂಡರ್‌ಅನ್ನು ಮುದ್ರಿಸಿ ಎಲ್ಲಾ ಶಾಲಾ–ಕಾಲೇಜುಗಳಿಗೂ ಸರ್ಕಾರಕ್ಕೂ ಗಣ್ಯರಿಗೂ ವಿತರಿಸಲಾಗಿದೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ** ಚರ್ಚಿತವಾದ **ವಿಷಯ ಸಂಖ್ಯೆ 1**ಕ್ಕೆ ಸಂಬಂಧಿಸಿದಂತೆ ಘಟಕ ಕಾಲೇಜುಗಳ ಬೋಧಕ–ಬೋಧಕೇತರ ಸಿಬ್ಬಂದಿಗಳ ಸೇವಾವಿಲೀನೀಕರಣ ಪರಿನಿಯಮವನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. **ವಿಷಯ ಸಂಖ್ಯೆ 2**ಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶಕರ ಪಟ್ಟಿಯನ್ನು ಪರಿಗ್ರಹಿಸಿ ಸೂಕ್ತರೀತಿಯಿಂದ ಕಾರ್ಯಗತಗೊಳಿಸಲಾಗಿದೆ.

ನಿರ್ಣಯ: **ಸಭೆಯು ಅನುಪಾಲನಾ ವರದಿಯನ್ನು ಪರಿಶೀಲಿಸಿ ತನ್ನ ಒಪ್ಪಿಗೆಯನ್ನು ನೀಡಿತು.**

**ವಿಷಯ 2: 12.03.2013ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಹಣಕಾಸು ಸಮಿತಿಯ ಒಂಭತ್ತನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯನ್ನು ದಿನಾಂಕ: 12.03.2013ರಂದು ನಡೆಯಲಿದೆ. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಹಣಕಾಸು ಸಮಿತಿಯ ನಡಾವಳಿಯನ್ನು ಪರಿಶೀಲಿಸಿ ತನ್ನ ಒಪ್ಪಿಗೆಯನ್ನು ನೀಡಿತು.**

**ವಿಷಯ 3: 2013–14ನೇ ಸಾಲಿನಿಂದ ಡಿ.ಲಿಟ್ ಪದವಿಯನ್ನು ಪ್ರಾರಂಭಿಸುವ ಬಗೆಗೆ.**

ಟಿಪ್ಪಣಿ: ಅಧ್ಯಾಯ 5ರ ಶಾಸನಗಳು ಶೀರ್ಷಿಕೆಯ ಪರಿಚ್ಛೇದ 38(5)ರ ಅವಕಾಶಗಳನ್ವಯ ಸಂಸ್ಕೃತ ಭಾಷೆ, ಸಾಹಿತ್ಯ ಹಾಗೂ ನಾನಾ ಶಾಸ್ತ್ರಗಳಲ್ಲಿ, ವೇದ–ವೇದಾಂತ–ವೇದಾಂಗಶಾಸ್ತ್ರಗಳಲ್ಲಿ ಮತ್ತಿತರ ಸಂಬಂಧಿತ ವಿಷಯಗಳಲ್ಲಿ ವಿಶ್ವವಿದ್ಯಾಲಯವು ಸಂಶೋಧನೆ ಹಾಗೂ ಮಾರ್ಗದರ್ಶನವನ್ನು ಮಾಡಬೇಕಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪಿಎಚ್.ಡಿ.ಗೆ ಸಂಬಂಧಿಸಿದಂತೆ ದಿನಾಂಕ: 14, 15 ಮತ್ತು 16, ಡಿಸೆಂಬರ್ 2010ರಂದು ನಡೆದ ಎಂ.ಫಿಲ್., ಪಿಎಚ್.ಡಿ. ಮತ್ತು ಡಿ.ಲಿಟ್. ಪದವಿಗಳ ನಿಯಮಾವಳಿ ಸಮಿತಿ ಸಭೆಯಲ್ಲಿ ಡಿ.ಲಿಟ್ ನಿಯಮಾವಳಿಗಳನ್ನು ತಾತ್ಪೂರ್ತಿಕವಾಗಿ ರೂಪಿಸಿತ್ತು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಡಿ.ಲಿಟ್ ಪರಿನಿಯಮವನ್ನು ರೂಪಿಸಿ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಲಾಗಿತ್ತು. ಘನತೆವೆತ್ತ ರಾಜ್ಯಪಾಲರು ಡಿ.ಲಿಟ್ ಪರಿನಿಯಮವನ್ನು ಅಂಕಿತಗೊಳಿಸಿ ದಿನಾಂಕ: 16.02.2013ರ ಉನ್ನತ ಶಿಕ್ಷಣ ಇಲಾಖೆಯ ಪತ್ರದ ಪ್ರಕಾರ ಅನುಮೋದನೆಗೊಂಡಿದೆ. 2013–14ನೇ ಸಾಲಿನಲ್ಲಿ ಡಿ.ಲಿಟ್ ಪದವಿಯನ್ನು ಪ್ರಾರಂಭಿಸುವುದಕ್ಕೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು 2013–14ನೇ ಸಾಲಿನಿಂದ ಡಿ.ಲಿಟ್ ಪದವಿಯನ್ನು ಪ್ರಾರಂಭಿಸಬಹುದೆಂದು ಅನುಮೋದನೆ ನೀಡಿತು.**

**ವಿಷಯ 4: ಅನಧ್ಯಯನಕ್ಕೆ ಸಂಬಂಧಿಸಿದ ಉಚ್ಚ ನ್ಯಾಯಾಲಯದ ತೀರ್ಪಿನ ಬಗೆಗೆ.**

ಟಿಪ್ಪಣಿ: ಸಂಸ್ಕೃತ ಕಾಲೇಜುಗಳಲ್ಲಿನ ಅನಧ್ಯಯನ ರಜೆಯನ್ನು ರದ್ದುಪಡಿಸಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಹೊರಡಿಸಿದ ದಿನಾಂಕ: 14.07.2011ರ ಸುತ್ತೋಲೆಯನ್ನು ಅಮಾನತು ಮಾಡುವಂತೆ ಕೋರಿ ಶ್ರೀ ವಿಘ್ನೇಶ್ವರ ಭಟ್ ಮತ್ತು ಇತರರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ಘನ ನ್ಯಾಯಾಲಯವು ವಾದ–ವಿವಾದಗಳನ್ನು ಪರಿಶೀಲಿಸಿ ಅಂತಿಮವಾಗಿ ವಿಶ್ವವಿದ್ಯಾಲಯದ ಪರವಾಗಿ ತೀರ್ಪು ನೀಡಿ, ಅನಧ್ಯಯನಕ್ಕೆ ಸಂಬಂಧಿಸಿದಂತೆ ಇನ್ನು ಆರು ತಿಂಗಳ ಒಳಗಾಗಿ ಪ್ರಶಿಕ್ಷಣ ಪರಿಷತ್ತು ಅಥವಾ ಪ್ರಶಾಸನ ಸಮಿತಿಯಲ್ಲಿ ನಿರ್ಣಯ ಕೈಗೊಳ್ಳುವಂತೆ ಆದೇಶಿಸಿದೆ. ನ್ಯಾಯಾಲಯದ ತೀರ್ಪಿನ ಸಾರಾಂಶ ಈ ಕೆಳಗಿನಂತಿದೆ:

**WP 28597/2011, WP No. 28730 to 28732/2011; ದಿನಾಂಕ: 17.01.2013ರ ತೀರ್ಪಿನ ಸಾರಾಂಶ**

ಈ ರಿಟ್ ಅರ್ಜಿ 14.07.2011ರ ನಂ. KSU/39/KA/2011-12/420-/1 (Annexure-E) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಹೊರಡಿಸಿದ ಸುತ್ತೋಲೆಯನ್ನು ಅಮಾನತ್ತುಗೊಳಿಸಲು ಪ್ರಾರ್ಥಿಸಿದ್ದು.

ಅರ್ಜಿದಾರರು ವಿದ್ಯಾರ್ಥಿಗಳು ಮತ್ತು ಸಂಸ್ಕೃತ ಕಾಲೇಜಿನ ಬೋಧಕರ ಸಂಘವಾಗಿದ್ದು, ಅರ್ಜಿದಾರರ ಅಭ್ಯಂತರವೇನೆಂದರೆ: ಪುರಾತನ ಕಾಲದಿಂದಲೂ, ನಮ್ಮ ಸಂಸ್ಕೃತಿ, ಪರಂಪರೆಗಳ ಹಿನ್ನೆಲೆಯಲ್ಲಿ ವೇದಗಳ ಅಧ್ಯಯನದ ಉದ್ದೇಶದಿಂದ, ಸಂಸ್ಕೃತ ಕಾಲೇಜುಗಳಲ್ಲಿ ಅಧ್ಯಯನ ಮತ್ತು ಅನಧ್ಯಯನದ ಅನುಷ್ಠಾನವಾಗಿ ವ್ಯಾಸಂಗ ಪದ್ಧತಿ ಅನೂಚಾನವಾಗಿ ನಡೆದುಕೊಂಡು ಬಂದಿದ್ದಿತು. ಅರ್ಜಿದಾರರ ಅಭ್ಯಂತರವೆಂದರೆ 14.07.2011ರ Annexure-E ಸುತ್ತೋಲೆ ದಿನಾಂಕ 07.07.2011 ಮತ್ತು 17.08.2011 ದಿನಾಂಕಗಳಂದು, ವಿಶ್ವವಿದ್ಯಾಲಯ ಅಂಗೀಕರಿಸಿದ/ಅನುಮೋದಿಸಿದ ನಿರ್ಣಯಗಳ ವಿರುದ್ಧವಾಗಿರುತ್ತವೆ. ಹೀಗಾಗಿ, ವಿಶ್ವವಿದ್ಯಾಲಯವು ಪರಂಪರೆ ಮತ್ತು ಅನೂಚಾನವಾಗಿ ನಡೆದುಬಂದ ಪದ್ಧತಿಗಳನ್ನು ಗಣನೆಗೆ ತೆಗೆದುಕೊಂಡು, ವೇದದ ಅಧ್ಯಯನ 'ಅಧ್ಯಯನ' ಕಾಲಾವಧಿಯಲ್ಲೂ, ಅನಧ್ಯಯನ ಕಾಲದಲ್ಲಿ 'ವಿರಾಮ' ತೆಗೆದುಕೊಳ್ಳುವಂತೆಯೂ ಸುತ್ತೋಲೆಯಲ್ಲಿ ಸೇರಿಸಬೇಕಿರುತ್ತದೆ. ಆದರೆ ವಿರುದ್ಧವಾಗಿ, Annexure-E ಹೊರಡಿಸಲಾಗಿದೆ. ಹಾಗಾಗಿ, ಬೇರೆ ವಿಶ್ವವಿದ್ಯಾನಿಲಯಗಳು ಅಭ್ಯಸಿಸುತ್ತಿರುವ ದಿನನಿತ್ಯದ ವ್ಯಾಸಂಗ ಕಾರ್ಯಕ್ರಮಗಳು, ಪುರಾತನವಾದ ವೇದಾಧ್ಯಯನದ ಪದ್ಧತಿಗೆ ವಿರುದ್ಧವಾಗಿದ್ದು, ಈ ಸುತ್ತೋಲೆಯನ್ನು ನಿರ್ಬಂಧಿಸುವಂತೆ ಪ್ರಾರ್ಥಿಸಿರುತ್ತಾರೆ.

ವಿಶ್ವವಿದ್ಯಾಲಯದ ಪರವಾಗಿ ವಾದ ಮಂಡಿಸಿದ ವಕೀಲರು, Sec 2A of UGC Act ಪ್ರಕಾರ, ಎಲ್ಲಾ ವಿಶ್ವವಿದ್ಯಾಲಯಗಳೂ UGCಯ ಪರವಾನಿಗೆ ಪಡೆಯಬೇಕಾಗಿರುತ್ತದೆ. ಈ ಪರವಾನಿಗೆ (recognition) ಪಡೆಯಲು, ವಿಶ್ವವಿದ್ಯಾಲಯ, ಇತರೆ ವಿಶ್ವವಿದ್ಯಾಲಯಗಳಂತೆ ಏಕರೂಪ ಅಧ್ಯಯನ ವ್ಯವಸ್ಥೆ, ಏಕರೂಪ ವ್ಯಾಸಂಗ ವ್ಯವಸ್ಥೆ ಮತ್ತು ಏಕರೂಪ ವ್ಯಾಸಂಗೇತರ ಚಟುವಟಿಕೆಗಳು, ಇತ್ಯಾದಿ ಏಕರೂಪ ನಿಯಮಗಳನ್ನು ಪಾಲಿಸಬೇಕಿರುತ್ತದೆ. ಈ ನಿಯಮಗಳ ಪಾಲನೆಯ ದೃಷ್ಟಿಯ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ Annexure-E ಸುತ್ತೋಲೆಯನ್ನು Sec 2Fನ ನಿಯಮಗಳ ಪಾಲನೆಯ ದೃಷ್ಟಿಯಿಂದ ಮತ್ತು ಏಕರೂಪ ರಜಾ ಮತ್ತು ಇತರೆ ಅನುಕೂಲತೆಗಳನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಕಾಲೇಜುಗಳು/ಸಂಸ್ಥೆಗಳು ಏಕರೂಪ ನಿಯಮಬದ್ಧವಾಗಿ ನಡೆಯಲು ಹೊರಡಿಸಲಾಗಿದ್ದು, ಈ ಸುತ್ತೋಲೆ ಯಾವುದೇ ಕಾನೂನುಬಾಹಿರವಾಗಿರುವುದಿಲ್ಲ, ಮುಂತಾಗಿ ವಾದ ಮಂಡಿಸಿರುತ್ತಾರೆ.

ಇದಕ್ಕೆ ಪ್ರತಿಯಾಗಿ ಅರ್ಜಿದಾರರ ವಕೀಲರು, ವಿಶ್ವವಿದ್ಯಾಲಯವು 07.07.2011 ಮತ್ತು 17.08.2011ರ ನಿರ್ಣಯಗಳು ವಿಶ್ವವಿದ್ಯಾಲಯವು UGC ನಿಯಮಾವಳಿಯನ್ನು ಪಾಲಿಸಲು ಅಂಗೀಕರಿಸಲಾಗಿದ್ದರೂ, ವಿಶ್ವವಿದ್ಯಾಲಯವು ಸಿಂಡಿಕೇಟ್ ಮತ್ತು ಇತರೆ ಸಮಿತಿಗಳ ಅಭಿಪ್ರಾಯವನ್ನು ಪರಂಪರಾಗತವಾದ ಅಧ್ಯಯನ ಮತ್ತು ಅನಧ್ಯಯನದ ಪದ್ಧತಿ ಪಾಲಿಸುವ ವಿಚಾರವಾಗಿ ಪಡೆಯುವುದಾಗಿ ತಿಳಿಸಿದ್ದರೂ, ಆಯಾ ಸಮಿತಿಗಳ ಮುಂದೆ ಮಂಡಿಸದೆ ಏಕಪಕ್ಷೀಯವಾಗಿ ತೆಗೆದುಕೊಂಡು ಸುತ್ತೋಲೆ ಹೊರಡಿಸಿರುವುದು, ಸಮಿತಿಗಳ ನಿರ್ಣಯದ ವಿರುದ್ಧವಾಗಿದ್ದು ಕಾನೂನುಬಾಹಿರ ಮತ್ತು ಸಮಿತಿಗಳ ನಿರ್ಣಯದ ವಿರುದ್ಧವಾಗಿರುತ್ತದೆ ಎಂದು ಮುಂತಾಗಿ ವಾದ ಮಂಡಿಸಿರುತ್ತಾರೆ.

ನ್ಯಾಯಾಲಯವು Annexure E ಸುತ್ತೋಲೆಯನ್ನು ಕೂಲಂಕಷವಾಗಿ ಗಮನಿಸಿದಾಗ ವೇದ್ಯವಾದ ಸಂಗತಿಯೆಂದರೆ, ಏಕರೂಪತೆ ತರುವ ಉದ್ದೇಶದಿಂದ ಮತ್ತು ಏಕರೂಪತೆ ತರುವುದು, UGCಯ ನಿಯಮಗಳ ಪಾಲಿಸುವಿಕೆಯಿಂದಾದುದರಿಂದ ಈ ಸುತ್ತೋಲೆ ಹೊರಡಿಸಲಾಗಿದೆ. ಇದರೊಂದಿಗೆ ಅನೂಚಾನವಾಗಿ ನಡೆದುಕೊಂಡು ಬಂದಿರುವ 'ಅಧ್ಯಯನ'/ 'ಅನಧ್ಯಯನ'ದ ಪರಂಪರೆಯ ವಿಚಾರವಾಗಿ ಚರ್ಚಿಸಿ ನಿರ್ಣಯಿಸಲಾದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕಿರುತ್ತದೆ. ಹೀಗಾಗಿ, ಈ ಎಲ್ಲಾ ವಿಚಾರಗಳ ಬಗ್ಗೆ ತುಲನಾತ್ಮಕವಾದ ನಿರ್ಧಾರ ತೆಗೆದುಕೊಳ್ಳುವ ಅಂತಿಮ ನಿರ್ಧಾರ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಟ್ಟಿರುತ್ತದೆ. ಹೀಗಾಗಿ, Annexure Eಯನ್ನು ಈ ಸಂದರ್ಭದಲ್ಲಿ ಅಮಾನತ್ತುಗೊಳಿಸುವ ಪ್ರಶ್ನೆ ಉದ್ಭವವಾಗುವುದಿಲ್ಲ. ಹೀಗಿದ್ದರೂ, ವಿಶ್ವವಿದ್ಯಾಲಯವು 07.07.2011 ಮತ್ತು 17.08.2011ರ ಅನುಮೋದಿಸಲಾದ ನಿರ್ಣಯಗಳ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಹಕ್ಕುಳ್ಳದ್ದಾಗಿರುತ್ತದೆ. ಹಾಗೆ ತೆಗೆದುಕೊಳ್ಳುವ ನಿರ್ಣಯ, ವಿಶ್ವವಿದ್ಯಾಲಯದ ದೈನಂದಿನ ಚಟುವಟಿಕೆಗಳು, ಅನುಷ್ಠಾನಗೊಳಿಸಬೇಕಾದ ನೀತಿ, ನಿಯಮಗಳು, ಏಕರೂಪತೆ, ಇತ್ಯಾದಿಗಳ ಜೊತೆ, UGCಯ 2F Actನ ನಿಯಮ ಪಾಲನೆಗಳ ಎಲ್ಲ ಪ್ರಾಸಂಗಿಕ ಅನುಷ್ಠಾನತೆಗಳೊಡನೆ, ಇನ್ನಾರು ತಿಂಗಳಲ್ಲಿ ವಿಶ್ವವಿದ್ಯಾಲಯವು ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಿರುತ್ತದೆ. ಈ ನಿರ್ಣಯವು ವಿಶ್ವವಿದ್ಯಾಲಯದ ಏಕರೂಪತೆ ಮತ್ತು ವಿದ್ಯಾಭ್ಯಾಸದ ಮಾರ್ಪಾಡಿಗೆ ಒತ್ತಾಸೆ ಕೊಡುವುದರ ಜೊತೆಗೆ ನಿರ್ಣಯಗಳ ತಿರುಳನ್ನೂ ಗಮನಿಸಬೇಕಾಗುತ್ತದೆ.

ಅದರಂತೆ, ಈ ಅರ್ಜಿಗಳ ವಿಲೇವಾರಿ ಮಾಡಲಾಗಿದೆ. ಇನ್ನು ವಿಶ್ವವಿದ್ಯಾಲಯವು ಮುಂದೆ ನಡೆಯುವ **ಪ್ರಶಿಕ್ಷಣ ಪರಿಷತ್ತು** (Academic Council) ಅಥವಾ **ಪ್ರಶಾಸನ ಸಮಿತಿ** (Syndicate) ಸಭೆಗಳ ಮುಂದೆ ಈ ಬಗ್ಗೆ ಮಂಡಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳುವ ಹಕ್ಕುಳ್ಳದ್ದಾಗಿರುತ್ತದೆ. ಈ ನಿರ್ಣಯ ಆರು ತಿಂಗಳ ಅವಧಿಯಲ್ಲಿ ತೆಗೆದುಕೊಳ್ಳಬೇಕಿರುತ್ತದೆ.

**ಶ್ರೀ ಹುಲುವಾಡಿ ಜಿ. ರಮೇಶ್,** ನ್ಯಾಯಮೂರ್ತಿ

ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಅನಧ್ಯಯನಕ್ಕೆ ಸಂಬಂಧಿಸಿದಂತೆ ಆಗಿರುವ ಎಲ್ಲ ವಿವರಗಳನ್ನು ಕುಲಪತಿಗಳು ಸಭೆಗೆ ವಿವರಿಸಿದರು. ಉಚ್ಚ ನ್ಯಾಯಾಲಯದ ತೀರ್ಪಿನ ಮುಖ್ಯಾಂಶಗಳನ್ನು ಸಭೆಯ ಗಮನಕ್ಕೆ ತಂದರು. ನ್ಯಾಯಾಲಯದ ತೀರ್ಪಿನಂತೆ ಅನಧ್ಯಯನದ ರಜೆಯನ್ನು ರದ್ದುಪಡಿಸಿರುವ ಅಂಶಕ್ಕೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 5: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳ ಆಯ್ಕೆ ಸಮಿತಿ ರಚನೆಗೆ ವಿಷಯತಜ್ಞರ ಪಟ್ಟಿಯನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳ ಆಯ್ಕೆ ಸಮಿತಿ ರಚನೆಗಾಗಿ ಈ ಕೆಳಕಂಡ ವಿಷಯತಜ್ಞರ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ವಿಷಯತಜ್ಞರ ಪಟ್ಟಿಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಲಾಗುವುದು.

ನಿರ್ಣಯ: **ಸಭೆಯು ಕೆಳಕಂಡ ವಿಷಯತಜ್ಞರ ಪಟ್ಟಿಗೆ ತನ್ನ ಅನುಮೋದನೆಯನ್ನು ನೀಡಿತು.**

| ಕ್ರ.ಸಂ. | ತಜ್ಞರ ಹೆಸರು ಮತ್ತು ವಿಳಾಸ | ವಿಷಯ | ನಿಕಾಯ |
|---|---|---|---|
| 01. | **ಪ್ರೊ. ಉಜ್ವಲ ಝಾ**<br>ನಿರ್ದೇಶಕರು, ಸೆಂಟರ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್ ಇನ್ ಸಂಸ್ಕೃತ, ಪೂನ ವಿಶ್ವವಿದ್ಯಾಲಯ, ಪುಣೆ | ನ್ಯಾಯ, ಮೀಮಾಂಸಾ, ದರ್ಶನ | ಶಾಸ್ತ್ರ ನಿಕಾಯ |
| 02. | **ಪ್ರೊ. ಸಿ. ಉಪೇಂದ್ರ ರಾವ್**<br>ಪ್ರಾಧ್ಯಾಪಕರು, ಸಂಸ್ಕೃತ ಅಧ್ಯಯನ ವಿಶೇಷ ಕೇಂದ್ರ, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ, ನವದೆಹಲಿ | ಸಂಸ್ಕೃತ ಸಾಹಿತ್ಯ, ಭಾಷೆ, ಪ್ರಾಕೃತ | ಭಾಷಾ ನಿಕಾಯ |
| 03. | **ಪ್ರೊ. ಪಿ.ಸಿ. ಮುರಳೀಮಾಧವನ್**<br>ಪ್ರಾಧ್ಯಾಪಕರು, ಸಾಹಿತ್ಯ ವಿಭಾಗ, ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯ, ಕಾಲಡಿ, ಕೇರಳ | ನ್ಯಾಯ, ಸಾಹಿತ್ಯ, ಸಂಸ್ಕೃತ | ಭಾಷಾ/ಶಾಸ್ತ್ರ ನಿಕಾಯ |
| 04. | **ಪ್ರೊ. ಆರ್.ಸಿ. ಪಂಡಾ**<br>ವ್ಯಾಕರಣಶಾಸ್ತ್ರ ಪ್ರಾಧ್ಯಾಪಕರು, ಬನಾರಸ್ ಹಿಂದೂ ವಿಶ್ವವಿದ್ಯಾಲಯ, ವಾರಾಣಸಿ | ವ್ಯಾಕರಣ, ಸಂಸ್ಕೃತ | ಭಾಷಾ/ಶಾಸ್ತ್ರ ನಿಕಾಯ |
| 05. | **ಪ್ರೊ. ಓ. ಶ್ರೀ ರಾಮಲಾಲ್**<br>ನ್ಯಾಯಶಾಸ್ತ್ರ ಪ್ರಾಧ್ಯಾಪಕರು, ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ | ನ್ಯಾಯ, ದರ್ಶನ | ಶಾಸ್ತ್ರ ನಿಕಾಯ |

| | | | |
|---|---|---|---|
| 06. | **ಪ್ರೊ. ರಾಜಾರಾಮ್ ಶುಕ್ಲ**<br>ನ್ಯಾಯಶಾಸ್ತ್ರ ಪ್ರಾಧ್ಯಾಪಕರು, ಬನಾರಸ್ ಹಿಂದೂ ವಿಶ್ವವಿದ್ಯಾಲಯ, ವಾರಾಣಸಿ | ನ್ಯಾಯ, ದರ್ಶನ, ವೇದಾಂತ | ವೇದಾಂತ/ಶಾಸ್ತ್ರ ನಿಕಾಯ |
| 07. | **ಪ್ರೊ. ಎಂ.ಎಲ್.ಎನ್. ಮೂರ್ತಿ**<br>ವೇದಾಂತ ಪ್ರಾಧ್ಯಾಪಕರು, ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ | ವೇದಾಂತ, ದರ್ಶನ | ವೇದಾಂತ ನಿಕಾಯ |
| 08. | **ಪ್ರೊ. ಎಂ.ಎಸ್. ಭವಾನಿ (ಪರಿಶಿಷ್ಟ ಜಾತಿ)**<br>ಸಂಸ್ಕೃತ ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು | ಸಂಸ್ಕೃತ | ಭಾಷಾ ನಿಕಾಯ |
| 09. | **ಪ್ರೊ. ಎ. ರಾಮುಲು**<br>ಸಂಸ್ಕೃತ ವಿಭಾಗ, ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ್ | ಸಂಸ್ಕೃತ, ದರ್ಶನ | ಭಾಷಾ ನಿಕಾಯ |
| 10. | **ಪ್ರೊ. ವಿ. ಕುಟುಂಬಶಾಸ್ತ್ರೀ**<br>ಕುಲಪತಿಗಳು, ಸೋಮನಾಥ ಸಂಸ್ಕೃತ ವಿಶ್ವವಿದ್ಯಾಲಯ, ಗುಜರಾತ್ | ದರ್ಶನ, ವೇದಾಂತ | ವೇದಾಂತ/ಭಾಷಾ ನಿಕಾಯ |
| 11. | **ಪ್ರೊ. ರೇವತಿ ಎಸ್.**<br>ಸಂಸ್ಕೃತ ಪ್ರಾಧ್ಯಾಪಕರು, ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ | ದರ್ಶನ, ವೇದಾಂತ | ವೇದಾಂತ/ಭಾಷಾ ನಿಕಾಯ |
| 12. | **ಪ್ರೊ. ಎಂ.ಆರ್. ವೀರಭದ್ರಸ್ವಾಮಿ**<br>ಸಂಸ್ಕೃತ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು | ಸಂಸ್ಕೃತ ಸಾಹಿತ್ಯ | ಭಾಷಾ ನಿಕಾಯ |
| 13. | **ಪ್ರೊ. ಚಂದ್ರಮೌಳಿ ಎಸ್. ನಾಯ್ಕರ**<br>ಸಂಸ್ಕೃತ ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ಸಂಸ್ಕೃತ, ಪ್ರಾಕೃತ | ಭಾಷಾ ನಿಕಾಯ |
| 14. | **ಪ್ರೊ. ಎನ್. ರಾಧಾಕೃಷ್ಣ ಭಟ್**<br>ಸಂಸ್ಕೃತ ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು | ಸಂಸ್ಕೃತ ಸಾಹಿತ್ಯ, ಭಾಷೆ | ಭಾಷಾ ನಿಕಾಯ |
| 15. | **ಪ್ರೊ. ರಾಧಾವಲ್ಲಭ ತ್ರಿಪಾಠಿ**<br>ಕುಲಪತಿಗಳು, ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ, ನವದೆಹಲಿ | ಭಾಷೆ, ಸಾಹಿತ್ಯ | ಭಾಷಾ ನಿಕಾಯ |
| 16. | **ಪ್ರೊ. ಸಿ.ಎಸ್. ರಾಧಾಕೃಷ್ಣನ್**<br>ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸಂಸ್ಕೃತ ವಿಭಾಗ, ಪಾಂಡಿಚೆರಿ | ಭಾಷೆ, ಸಾಹಿತ್ಯ | ಭಾಷಾ ನಿಕಾಯ |
| 17. | **ಪ್ರೊ. ಮೈಥಿಲ್**<br>ಸಂಸ್ಕೃತ ಪ್ರಾಧ್ಯಾಪಕರು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ಭಾಷೆ, ಸಾಹಿತ್ಯ | ಭಾಷಾ ನಿಕಾಯ |
| 18. | **ಪ್ರೊ. ಜಿ.ಎ. ಶರ್ಮಾ**<br>ಸಂಸ್ಕೃತ ಪ್ರಾಧ್ಯಾಪಕರು, ಆಂಧ್ರ ವಿಶ್ವವಿದ್ಯಾಲಯ, ವಿಶಾಖಪಟ್ಟಣಂ | ಭಾಷೆ, ಸಾಹಿತ್ಯ | ಭಾಷಾ ನಿಕಾಯ |
| 19. | **ಪ್ರೊ. ಉಮಾ ವೈದ್ಯ**<br>ಕುಲಪತಿಗಳು, ಕಾಳಿದಾಸ ವಿಶ್ವವಿದ್ಯಾಲಯ, ನಾಗಪುರ | ಭಾಷೆ, ಸಾಹಿತ್ಯ | ಭಾಷಾ ನಿಕಾಯ |
| 20. | **ಪ್ರೊ. ಬಿ.ಎ. ದೊಡ್ಡಮನಿ (ಪರಿಶಿಷ್ಟ ಜಾತಿ)**<br>ಸಂಸ್ಕೃತ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು | ಭಾಷೆ, ಸಾಹಿತ್ಯ | ಭಾಷಾ ನಿಕಾಯ |
| 21. | **ಪ್ರೊ. ಬಿ.ಕೆ. ದಲಾಯಿ (ಪರಿಶಿಷ್ಟ ಜಾತಿ)**<br>ಸಂಸ್ಕೃತ ಪ್ರಾಧ್ಯಾಪಕರು, ಪೂನಾ ವಿಶ್ವವಿದ್ಯಾಲಯ, ಪೂನಾ | ಭಾಷೆ, ಸಾಹಿತ್ಯ | ಭಾಷಾ ನಿಕಾಯ |
| 22. | **ಪ್ರೊ. ಎಂ.ಎನ್. ಜೋಶಿ**<br>ಸಂಸ್ಕೃತ ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ಭಾಷೆ, ಸಾಹಿತ್ಯ | ಭಾಷಾ ನಿಕಾಯ |
| 23. | **ಪ್ರೊ. ಕೆ.ಇ. ದೇವನಾಥನ್**<br>ಪ್ರಾಧ್ಯಾಪಕರು (ಮೀಮಾಂಸಾ), ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ | ಮೀಮಾಂಸಾ, ದರ್ಶನ, ವೇದಾಂತ | ವೇದಾಂತ/ಶಾಸ್ತ್ರ ನಿಕಾಯ |
| 24. | **ಪ್ರೊ. ಆರ್. ದೇವನಾಥನ್**<br>ಕುಲಪತಿಗಳು, ರಾಜಸ್ಥಾನ ಸಂಸ್ಕೃತ ವಿಶ್ವವಿದ್ಯಾಲಯ, ಜೈಪುರ | ಭಾಷೆ, ಸಾಹಿತ್ಯ | ಭಾಷಾ/ಶಾಸ್ತ್ರ ನಿಕಾಯ |
| 25. | **ಪ್ರೊ. ಮುರಳೀಧರ ಶರ್ಮಾ**<br>ಪ್ರಾಧ್ಯಾಪಕರು, ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ | ಭಾಷೆ, ಸಾಹಿತ್ಯ | ಭಾಷಾ ನಿಕಾಯ |
| 26. | **ಪ್ರೊ. ಶಶಿಪ್ರಭಾ ಕುಮಾರ್**<br>ಸಂಸ್ಕೃತ ವಿಶೇಷ ಕೇಂದ್ರ, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ, ನವದೆಹಲಿ | ದರ್ಶನ | ವೇದಾಂತ ನಿಕಾಯ |
| 27. | **ಪ್ರೊ. ಅಂಬಾ ಕುಲಕರ್ಣಿ**<br>ಮುಖ್ಯಸ್ಥರು, ಸಂಸ್ಕೃತ ಅಧ್ಯಯನ ಕೇಂದ್ರ, ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯ, ಹೈದರಾಬಾದ್ | ಭಾಷೆ, ಸಂಶೋಧನೆ | ಭಾಷಾ ನಿಕಾಯ |
| 28. | **ಪ್ರೊ. ಸಿ.ಎಚ್.ಪಿ. ಸತ್ಯನಾರಾಯಣ (ಪರಿಶಿಷ್ಟ ಪಂಗಡ)**<br>ಸಂಸ್ಕೃತ ಸಂಶೋಧನಾ ವಿಭಾಗ, ನಿರ್ದೇಶಕರು, ದೂರಶಿಕ್ಷಣ ಕೇಂದ್ರ, ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ | ಸಂಶೋಧನೆ, ಭಾಷೆ, ಸಾಹಿತ್ಯ | ಭಾಷಾ ನಿಕಾಯ |

| | | | |
|---|---|---|---|
| 29. | **ಪ್ರೊ. ಎಸ್.ಎಸ್. ಮೂರ್ತಿ**<br>ವ್ಯಾಕರಣಶಾಸ್ತ್ರ ಪ್ರಾಧ್ಯಾಪಕರು, ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ | ವ್ಯಾಕರಣ | ಶಾಸ್ತ್ರ ನಿಕಾಯ |
| 30. | **ಪ್ರೊ. ಮಲ್ಹಾರ್ ಅರವಿಂದ ಕುಲಕರ್ಣಿ**<br>ಸಂಸ್ಕೃತ ಪ್ರಾಧ್ಯಾಪಕರು, ಫ್ಯಾಕಲ್ಟಿ ಆಫ್ ಆರ್ಟ್ಸ್, ಐಐಟಿಬಿ, ಪಾವಿಯಾ, ಮುಂಬಯಿ | ವ್ಯಾಕರಣ | ಭಾಷಾ/ಶಾಸ್ತ್ರ ನಿಕಾಯ |
| 31. | **ಪ್ರೊ. ಎಂ.ವಿ. ರಮಣಾ (ಪರಿಶಿಷ್ಟ ಜಾತಿ)**<br>ಸಂಸ್ಕೃತ ವಿಭಾಗ, ಆಂಧ್ರ ವಿಶ್ವವಿದ್ಯಾಲಯ, ವಿಶಾಖಪಟ್ಟಣಂ | ಭಾಷೆ, ಸಾಹಿತ್ಯ | ಭಾಷಾ ನಿಕಾಯ |
| 32. | **ಪ್ರೊ. ಗೋಪಬಂಧು ಮಿಶ್ರ**<br>ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ, ಬನಾರಸ್ ಹಿಂದೂ ವಿಶ್ವವಿದ್ಯಾಲಯ, ವಾರಾಣಸಿ | ವ್ಯಾಕರಣ, ಸಾಹಿತ್ಯ | ಭಾಷಾ ನಿಕಾಯ |
| 33. | **ಪ್ರೊ. ಟಿ. ದೇವರಾಜನ್**<br>ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ, ಕೇರಳ ವಿಶ್ವವಿದ್ಯಾಲಯ, ತಿರುವನಂತಪುರಂ | ಸಾಹಿತ್ಯ, ಸಂಸ್ಕೃತ | ಭಾಷಾ ನಿಕಾಯ |
| 34. | **ಪ್ರೊ. ಗೌರಿ ಮಹೂಲ್ಕರ್**<br>ಮುಖ್ಯಸ್ಥರು, ಸಂಸ್ಕೃತ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ | ಸಾಹಿತ್ಯ, ಸಂಸ್ಕೃತ | ಭಾಷಾ ನಿಕಾಯ |
| 35. | **ಪ್ರೊ. ಜಿ.ಎಸ್.ಆರ್. ಕೃಷ್ಣಮೂರ್ತಿ**<br>ಸಾಹಿತ್ಯ ವಿಭಾಗ, ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ | ಸಾಹಿತ್ಯ, ಸಂಸ್ಕೃತ | ಭಾಷಾ ನಿಕಾಯ |
| 36. | **ಪ್ರೊ. ರಾಮಕಿಶೋರ್ ತ್ರಿಪಾಠಿ**<br>ಪ್ರಾಧ್ಯಾಪಕರು, ವೇದಾಂತ ವಿಭಾಗ, ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ | ಭಾಷೆ, ಶಾಸ್ತ್ರ | ಶಾಸ್ತ್ರ ನಿಕಾಯ |
| 37. | **ಪ್ರೊ. ಕೆ.ವಿ. ರಾಮಕೃಷ್ಣಮಾಚಾರ್ಲು**<br>ಪ್ರಾಧ್ಯಾಪಕರು, ವ್ಯಾಕರಣ ವಿಭಾಗ, ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ | ಭಾಷೆ, ಸಾಹಿತ್ಯ | ಶಾಸ್ತ್ರ ನಿಕಾಯ |
| 38. | **ಪ್ರೊ. ಹೆಚ್.ಪಿ. ದೇವಕಿ**<br>ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು | ಭಾಷೆ, ಸಾಹಿತ್ಯ | ಶಾಸ್ತ್ರ ನಿಕಾಯ |

**ವಿಷಯ 6: ಪ್ರಾಧ್ಯಾಪಕ, ಸಹಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕ ನೇಮಕದ ಪರಿನಿಯಮದ ವಿಷಯ ತಿದ್ದುಪಡಿಯ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು, ಉಪ ಗ್ರಂಥಪಾಲಕರು ಮತ್ತು ಸಹಾಯಕ ಗ್ರಂಥಪಾಲಕರ ನೇಮಕಾತಿಗೆ ಸಂಬಂಧಿಸಿದಂತೆ ನೇಮಕಾತಿ ನಿಯಮಾವಳಿಯನ್ನು ಸಿದ್ಧಪಡಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಈ ಪರಿನಿಯಮವನ್ನು ಕರ್ನಾಟಕ ವಿಶ್ವವಿದ್ಯಾಲಯ ಕಾಯ್ದೆ 2000ರ ಅಡಿಯಲ್ಲಿ ರಚಿಸಲಾಗಿದೆ ಎಂದು ನಮೂದಿಸಲಾಗಿತ್ತು. ಆದರೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರತ್ಯೇಕ ಅಧಿನಿಯಮದಡಿ ಅಸ್ತಿತ್ವಕ್ಕೆ ಬಂದಿರುವುದರಿಂದ, ಪರಿನಿಯಮವನ್ನು ಸೂಕ್ತ ತಿದ್ದುಪಡಿಯೊಂದಿಗೆ ಸಲ್ಲಿಸುವಂತೆ ಘನತೆವೆತ್ತ ರಾಜ್ಯಪಾಲರ ಕಾರ್ಯಾಲಯದಿಂದ ಸೂಚಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಪರಿನಿಯಮವನ್ನು ತಿದ್ದುಪಡಿ ಮಾಡಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸಭೆಯ ಅವಗಾಹನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಪ್ರಾಧ್ಯಾಪಕ, ಸಹಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕ ನೇಮಕ ಪರಿನಿಯಮದ ವಿಷಯ ತಿದ್ದುಪಡಿಗೆ ತನ್ನ ಅನುಮೋದನೆಯನ್ನು ನೀಡಿತು.**

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

**ವಿಷಯ 1: ಜ್ಯೋತಿಷ್ಯ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ತರಗತಿಗಳನ್ನು ಆರಂಭಿಸಲು ಸಿದ್ಧಪಡಿಸಿದ ಪರಿನಿಯಮಕ್ಕೆ ತಿದ್ದುಪಡಿ ಮಾಡಿರುವುದನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಪರಿಚ್ಛೇದ 25ರ ಉಪವಿಭಾಗ 23–24ರ ಅನುಸಾರ ಜ್ಯೋತಿಷ್ಯ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ತರಗತಿಗಳನ್ನು ಆರಂಭಿಸಲು ಸಿದ್ಧಪಡಿಸಿದ ಪರಿನಿಯಮವನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಈ ಪರಿನಿಯಮವನ್ನು ಸೂಕ್ತ ತಿದ್ದುಪಡಿಯೊಂದಿಗೆ ಪುನಃ ಸಲ್ಲಿಸುವಂತೆ ಸರ್ಕಾರದಿಂದ ಸೂಚನೆ ಬಂದ ಹಿನ್ನೆಲೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ವಿಶ್ವವಿದ್ಯಾಲಯದ ಅಧಿಕಾರಗಳು ಶೀರ್ಷಿಕೆಯ ಪರಿಚ್ಛೇದ 5ರ 1 ಮತ್ತು 2ನೇ ನಿಯಮದ ಅಡಿಯಲ್ಲಿ 'ವಿನಿಯಮ' ಎಂದು ತಿದ್ದುಪಡಿ ಮಾಡಲಾಗಿದ್ದು, ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆಗಾಗಿ ಇರಿಸಿದೆ.

ನಿರ್ಣಯ: **ಸಭೆಯು ಜ್ಯೋತಿಷ್ಯ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ತರಗತಿಗಳನ್ನು ಆರಂಭಿಸಲು ಸಿದ್ಧಪಡಿಸಿದ ಪರಿನಿಯಮದ ತಿದ್ದುಪಡಿಗೆ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 2: ವಾಹನ ಚಾಲಕರಿಗೆ ಸಮವಸ್ತ್ರಭತ್ಯೆ ಹೆಚ್ಚಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಕುಲಪತಿ ಹಾಗೂ ಕುಲಸಚಿವರ ವಾಹನಗಳಿಗೆ ವಾಹನ ಚಾಲಕರಿದ್ದಾರೆ. ಇವರಿಗೆ ಎರಡು ಜೊತೆ ಸಮವಸ್ತ್ರವನ್ನು ನೀಡಿ, ನಿಯಮಾವಳಿಗಳ ಪ್ರಕಾರ ಕೇವಲ ಸಮವಸ್ತ್ರ ಭತ್ಯೆ ಮಾತ್ರ ನೀಡಲು ಅವಕಾಶವಿದ್ದು, ಮಾಹೆಯಾನ ರೂ. 250ಗಳನ್ನು ಸಮವಸ್ತ್ರಭತ್ಯೆಯಾಗಿ ನೀಡುತ್ತಿದ್ದು, ಈಗ ಬದಲಾದ ನಿಯಮಗಳ ಪ್ರಕಾರ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 12 ಎಸ್‌ಆರ್‌ಪಿ 2012, (III) ಬೆಂಗಳೂರು, ದಿನಾಂಕ: 14.06.2012ರ ಅನುಸಾರ ರೂ. 300ಅನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಾಹನ ಚಾಲಕರಿಗೆ ಸಮವಸ್ತ್ರಭತ್ಯೆಯಾಗಿ ನೀಡಲು ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಸರ್ಕಾರಿ ಆದೇಶದಂತೆ ಕ್ರಮವಹಿಸಲು ಒಪ್ಪಿಗೆ ನೀಡಿತು.**

**ವಿಷಯ 3: ಕಾವಲುಗಾರರಿಗೆ ಸಮವಸ್ತ್ರ ಭತ್ಯೆ ಮಂಜೂರು ಮಾಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಇಬ್ಬರು ಕಾವಲುಗಾರರಿದ್ದು, ಇವರಿಗೆ ಎರಡು ಜೊತೆ ಸಮವಸ್ತ್ರವನ್ನು ನೀಡಿ, ಕರ್ನಾಟಕ ಸರ್ಕಾರದ ನಿಯಮಾವಳಿಗಳಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಾವಲುಗಾರರಿಗೆ ('ಡಿ' ದರ್ಜೆ) ಮಾಹೆಯಾನ ರೂ. 250ರನ್ನು ಸಮವಸ್ತ್ರಭತ್ಯೆಯನ್ನು ನೀಡಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಸರ್ಕಾರಿ ಆದೇಶದಂತೆ ಕ್ರಮವಹಿಸಲು ಒಪ್ಪಿಗೆ ನೀಡಿತು.**

**ವಿಷಯ 4: ನಿರ್ದೇಶಕರು, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಇವರ ನಿಯೋಜನೆಯನ್ನು 3 ತಿಂಗಳು ವಿಸ್ತರಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಸ್ಥಾಪಿಸಲಾಗಿರುವ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಡಾ. ಶ್ರೀನಿವಾಸ ವರಖೇಡಿ, ಇವರ ನಿಯೋಜನಾ ಅವಧಿಯು ಮಾರ್ಚ್ 31ಕ್ಕೆ ಕೊನೆಗೊಳ್ಳಲಿದೆ. ಆದರೆ, ಪರೀಕ್ಷಾ ಕಾರ್ಯಗಳು, ಘಟಿಕೋತ್ಸವ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ತುರ್ತಾಗಿ ನಡೆಸಬೇಕಾದ ಹಿನ್ನೆಲೆಯಲ್ಲಿ ಇವರ ನಿಯೋಜನಾ ಅವಧಿಯನ್ನು 3 ತಿಂಗಳ ಕಾಲ ವಿಸ್ತರಿಸಲು, ಹಾಗೂ ಈ ಸಂಬಂಧ ಅವರ ಮಾತೃ ಸಂಸ್ಥೆಗೆ ಪತ್ರಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಮೇಲ್ಕಂಡ ವಿಷಯವನ್ನು ಚರ್ಚಿಸಿತು. 2012–13ನೇ ಸಾಲಿನ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪೂರೈಸಬೇಕಾದ ಹಿನ್ನೆಲೆಯಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಶ್ರೀನಿವಾಸ ವರಖೇಡಿ ಅವರನ್ನು ಜೂನ್ 30, 2013ರವರೆಗೆ ವಿಸ್ತರಿಸಲು ಸದಸ್ಯರು ಅನುಮೋದನೆಯನ್ನು ನೀಡಿದರು. ಆದರೆ, ಪ್ರಶಾಸನ ಸಮಿತಿ ಸದಸ್ಯರಲ್ಲಿ ಒಬ್ಬರಾದ ಡಾ. ಪಿ.ಬಿ. ಸಂತಪ್ಪನವರ ಈ ವಿಷಯದಲ್ಲಿ ತಮ್ಮ ಸಮ್ಮತ ಇಲ್ಲವೆಂಬ ಅಭಿಪ್ರಾಯವನ್ನು ದಾಖಲಿಸಲು ಸೂಚಿಸಿದರು.**

**ವಿಷಯ 5: ರಾಷ್ಟ್ರಮಟ್ಟದಲ್ಲಿ ವಿಜಯವೈಜಯಂತಿ ಬಹುಮಾನ ಪಡೆದ ಬಗೆಗೆ.**

ಟಿಪ್ಪಣಿ: ರಾಷ್ಟ್ರಿಯ ಸಂಸ್ಕೃತ ಸಂಸ್ಥಾನ, ನವದೆಹಲಿ, ಇವರು ದಿನಾಂಕ 02.03.2013ರಿಂದ 04.03.2013ರವರೆಗೆ ಹಿಮಾಚಲ ಪ್ರದೇಶದ ವೇದವ್ಯಾಸ ಪರಿಸರದಲ್ಲಿ ನಡೆಸಿದ ರಾಷ್ಟಮಟ್ಟದ ಭಾಷಣ ಹಾಗೂ ಶಲಾಕಾ ಸ್ಪರ್ಧೆಗಳಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ತಂಡವು ಜಯಗಳಿಸಿ **ವಿಜಯವೈಜಯಂತಿ ಬಹುಮಾನವನ್ನು ಪ್ರಶಸ್ತಿ ಫಲಕ**ದೊಂದಿಗೆ ಪಡೆದಿದೆ. ನಮ್ಮ ವಿದ್ಯಾರ್ಥಿಗಳು ಒಟ್ಟು 175 ಅಂಕಗಳನ್ನು ಪಡೆದು ಪ್ರಥಮಸ್ಥಾನದಲ್ಲಿದ್ದು, ನಂತರದ ಸ್ಥಾನದ ಅಂಕಗಳು – 80. ಈ ತಂಡದಲ್ಲಿ ಘಟಕ ಕಾಲೇಜಾದ ಮಹಾರಾಜ ಸಂಸ್ಕೃತ ಕಾಲೇಜಿನ ಒಬ್ಬ ವಿದ್ಯಾರ್ಥಿಯು ಭಾಗವಹಿಸಿದ್ದನು. ಉಳಿದಂತೆ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಕಾಲೇಜುಗಳ 22 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಭೆಯ ಅವಗಾಹನೆಗೆ ಮಂಡಿಸಿದೆ.

ನಿರ್ಣಯ: **ಸಭೆಯು ರಾಷ್ಟ್ರಮಟ್ಟದಲ್ಲಿ ವಿಜಯವೈಜಯಂತಿ ಬಹುಮಾನ ಪಡೆದದ್ದರ ಬಗ್ಗೆ ಹರ್ಷೋಲ್ಲಾಸವನ್ನು ವ್ಯಕ್ತಪಡಿಸಿತು. ಇದೇ ತಿಂಗಳು ನಾಲ್ಕನೇ ವಾರದಲ್ಲಿ ಅಭಿನಂದನ ಕಾರ್ಯಕ್ರಮವನ್ನು ಏರ್ಪಡಿಸಲು ಸೂಚಿಸಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು